■ ವಿಶಾಖ ಎನ್.



# ‘ಕೂಲಿ’ಯಲ್ಲಿ ಖೂಳ ರಜನಿ

ಮನಮೋಹನ ದೇಸಾಯಿ ನಿರ್ದೇಶನದ ‘ಕೂಲಿ’ ಹಿಂದಿ ಸಿನಿಮಾ 1983ರಲ್ಲಿ ಬಿಡುಗಡೆಯಾಗಿತ್ತು. ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿ ಕೂಲಿ ಮಾಡುವ ವ್ಯಕ್ತಿಯನ್ನು ನಾಯಕನನ್ನಾಗಿ ಮಾಡಿ, ಮನಮೋಹನ ದೇಸಾಯಿ ಆ ಚಿತ್ರವನ್ನು ಗೆಲ್ಲಿಸಿದ್ದರು. ಅಮಿತಾಭ್ ಬಚ್ಚನ್ ನಾಯಕನ ಪಾತ್ರದಲ್ಲಿ ನಟಿಸಿದ್ದ ಆ ಸಿನಿಮಾ ನೆನಪು ಇನ್ನೂ ಮಾಸಿಲ್ಲ. ಈಗ ಅದೇ ಹೆಸರಿನ ತಮಿಳು ಸಿನಿಮಾ ಸದ್ದು ಮಾಡುತ್ತಿದೆ. ಇದು ರಜನಿಕಾಂತ್ ಚಿತ್ರ ಎನ್ನುವುದು ಕುತೂಹಲಕ್ಕೆ ಬೋನಸ್ಸು. ಲೋಕೇಶ್ ಕನಕರಾಜ್ ನಿರ್ದೇಶಕರೆನ್ನುವ ವಿಷಯ ನಿರೀಕ್ಷೆ ಹರಳುಗಟ್ಟಲು ಕಾರಣ.

ಕೆಲವು ತಿಂಗಳ ಹಿಂದೆ ಚಿತ್ರದ ಮೊದಲ ನೋಟ ಕಟ್ಟಿಕೊಡುವ ಒಂದು ಟೀಸರ್ ಬಿಡುಗಡೆಯಾಗಿತ್ತು. ರಾಶಿ ರಾಶಿ ಬಂಗಾರದ ಬಣ್ಣದ ಕೈಗಡಿಯಾರಗಳು, ಮಿರಮಿರ ಮಿಂಚುವ ಚೈನುಗಳು. ಅದೊಂದು ಗೋದಾಮು. ಮುಚ್ಚಿದ ಶಟರ್ ಹೊರಗೆ ಬೈಕ್ ಒಂದು ಬಂದ ಶಬ್ದ. ಗೋದಾಮಿನ ಒಳಗೆ ಇರುವವರು ಯಾರು ಇರಬಹುದು ಎಂದು ನೋಡಲು ಹೋದರೆ, ಸಣ್ಣ ಕಿಂಡಿ ತೆರೆಯುತ್ತದೆ. ಅದರಲ್ಲಿ ರಜನಿಕಾಂತ್ ಕಣ್ಣುಗಳು ಕಾಣುತ್ತವೆ. ಕೆಲವೇ ಕ್ಷಣಗಳಲ್ಲಿ ಅಲ್ಲಿದ್ದವರೆಲ್ಲ ಒದೆ ತಿಂದು ಹಾರತೊಡಗುತ್ತಾರೆ.

ಲೋಕೇಶ್ ಕನಕರಾಜ್ ಅವರು ಕಾರ್ತಿ, ವಿಜಯ್, ವಿಜಯ್ ಸೇತುಪತಿ, ಕಮಲ ಹಾಸನ್ ಎಲ್ಲ ನಟರನ್ನೂ ಇಟ್ಟುಕೊಂಡು ಹಿಟ್ ಚಿತ್ರಗಳನ್ನು ಕೊಟ್ಟವರು. ಸ್ಟಾರ್ ನಟರನ್ನು ಅವರು ನಿಭಾಯಿಸುವ ರೀತಿಯೇ ಭಿನ್ನ. ಪ್ರತಿನಾಯಕನ ಪಾತ್ರವನ್ನೂ ಅವರು ನಾಯಕನಿಗೆ ಸರಿಸಮಾನವಾದ ಗ್ರಾಫ್‌ನಲ್ಲಿ ಹೆಣೆಯುತ್ತಾರೆ. ‘ಕೂಲಿ’ ಚಿತ್ರದಲ್ಲಿ ರಜನಿ ಅವರೊಳಗಿನ ಖಳನಾಯಕನನ್ನು ಅನಾವರಣ ಮಾಡುವುದಾಗಿ ಅವರು ಹೇಳಿದ್ದರು. ಸಿನಿಮಾ ಈ ಬೇಸಿಗೆಯಲ್ಲಿ ತೆರೆ ಕಾಣಬೇಕಿತ್ತು. ಆದರೆ, ಸಾಲು ಸಾಲು ಸ್ಟಾರ್ ನಟರ ಚಿತ್ರಗಳು ಬಿಡುಗಡೆಗೆ ನಿಂತಿರುವುದರಿಂದ ಆಗಸ್ಟ್‌ಗೆ ತೆರೆಕಾಣಿಸುವ ಯೋಚನೆಯನ್ನು ಲೋಕೇಶ್ ಮಾಡಿದ್ದಾರೆ ಎಂಬ ಸುದ್ದಿಯೂ ಹರಿದಾಡುತ್ತಿದೆ.

‘ಕೂಲಿ’ ಚಿತ್ರದ ಒಂದು ಹಾಡಿನಲ್ಲಿ ನಟಿ ಪೂಜಾ ಹೆಗಡೆ ನರ್ತಿಸುವ ವರ್ತಮಾನವೂ ಬಂದಿದೆ. ಚಿತ್ರದ ಪ್ರಮುಖ ಪಾತ್ರಧಾರಿಗಳು ಯಾರು ಎನ್ನುವುದನ್ನು ಗುಟ್ಟಾಗಿ ಇಟ್ಟಿರುವ ಲೋಕೇಶ್, ಸಂಗೀತ ನಿರ್ದೇಶಕ ಅನಿರುದ್ಧ ರವಿಚಂದರ್ ಅವರನ್ನು ನೆಚ್ಚಿಕೊಂಡಿರುವುದಕ್ಕೆ ಕೆಲವು ಉದಾಹರಣೆಗಳು ಈಗಾಗಲೇ ಸಿಕ್ಕಿವೆ. ತಮ್ಮ ಹಳೆಯ ಯಾವ ಚಿತ್ರದ ತಂತುವನ್ನೂ ಬೆಸೆಯದೆ ಕೂಲಿ ಸಿನಿಮಾ ಕಥೆ ನೇಯ್ದಿರುವುದಾಗಿ ಲೋಕೇಶ್ ಹೇಳಿದ್ದಾರೆ. ■

## ಪ್ರಭಾಸ್ ಸ್ಪಿರಿಟ್ ಮೇಲೆ ವಂಗ ಆತ್ಯಾತ್ಮವಿಶ್ವಾಸ



ಪ್ರಭಾಸ್ ಹಾಗೂ ಸಂದೀಪ್ ರೆಡ್ಡಿ ವಂಗ ಕಾಂಬಿನೇಷನ್‌ನ ತೆಲುಗು ಚಿತ್ರ ‘ಸ್ಪಿರಿಟ್’ ಕಳೆದ ವರ್ಷದ ಕೊನೆಯಲ್ಲಿ ಘೋಷಿತವಾಗಿತ್ತು. ಅದರ ಸಣ್ಣ ಝಲಕ್ ಇರುವ ವಿಡಿಯೊ, ಚಿತ್ರದಲ್ಲಿ ಪ್ರಭಾಸ್ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎನ್ನುವುದನ್ನು ಹೇಳಿದೆ.

ಚಿತ್ರದ ಕಥಾಹಂದರ ಏನು ಎನ್ನುವುದನ್ನು ಸಂದೀಪ್ ಗುಟ್ಟಾಗಿಯೇ ಇಟ್ಟಿದ್ದಾರೆ. ಆದರೆ, ಅವರು ಚಿತ್ರದ ಬಜೆಟ್ ಹಾಗೂ ಅದು ನಡೆಸಲಿರುವ ವಹಿವಾಟಿನ ಬಗೆಗೆ ಎಲ್ಲೆಡೆ ಮುಕ್ತವಾಗಿ ಮಾತಾಡುತ್ತಿದ್ದಾರೆ.

ಮುನ್ನೂರು ಕೋಟಿ ರೂಪಾಯಿ ಬಜೆಟ್‌ನಲ್ಲಿ ಈ ಚಿತ್ರ ತಯಾರಾಗುತ್ತಿದೆ. ಬಿಡುಗಡೆಯಾಗಲಿರುವ ಮೊದಲ ದಿನವೇ ನೂರೈವತ್ತು ಕೋಟಿ ರೂಪಾಯಿ ಸಂಗ್ರಹಿಸಲಿದೆ ಎಂಬ ವಿಶ್ವಾಸ ಅವರಿಗೆ ಇದೆ. ತಮ್ಮ ಹಾಗೂ ಪ್ರಭಾಸ್ ಇಬ್ಬರಿಗೂ ಇರುವ ಹೆಸರೇ ಚಿತ್ರವನ್ನು ಗೆಲ್ಲಿಸಿಕೊಡಲಿದೆ ಎಂದೂ ಅವರು ಅತಿ ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದಾರೆ.

ಪ್ರಭಾಸ್ ಅಭಿನಯದ, ಮಾರುತಿ ನಿರ್ದೇಶನದ ‘ದಿ ರಾಜಾ ಸಾಬ್’ ಚಿತ್ರವು ಬಿಡುಗಡೆಗೆ ಸಜ್ಜಾಗುತ್ತಿದೆ. ಹಾರರ್–ಕಾಮಿಡಿ ಪ್ರಭೇದಕ್ಕೆ ಸೇರಿದ ಈ ಚಿತ್ರದ ಗೆಲುವು ಮುಂದಿನ ಅವರ ಸಿನಿಮಾಗೆ ಇಂಧನವಾಗಿ ಒದಗಿಬರಲಿದೆ ಎನ್ನುವ ಲೆಕ್ಕಾಚಾರ ಕೂಡ ನಡೆಯುತ್ತಿದೆ. ಆದರೆ, ತಮ್ಮ ಸಿನಿಮಾ ಮೇಲೆ ಅಪಾರ ಆತ್ಮವಿಶ್ವಾಸ ಇದ್ದು, ಹಿಂದಿನ ಚಿತ್ರಗಳ ವಹಿವಾಟಿನ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಸಂದೀಪ್ ಪ್ರತಿಕ್ರಿಯಿಸಿದ್ದಾರೆ. ಮುಂದಿನ ವರ್ಷದ ಎರಡನೇ ಭಾಗದಲ್ಲಿ ‘ಸ್ಪಿರಿಟ್’ ಚಿತ್ರವು ತೆರೆಕಾಣುವ ನಿರೀಕ್ಷೆ ಇದೆ. ■